[ Govt. of Karnataka C.R.P. 67]

**Deposition Sheets (RP.No.57) Form No.4 (Civil)**

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 2118/2023**

ಪಿ.ಡಬ್ಲ್ಯೂಃ 7 ಸಿ.ಡಬ್ಲ್ಯೂಃ 15

ಸಾಕ್ಷಿದಾರನ ಹೆಸರು : ಸಂತೋಷ್ ಶೆಟ್ಟಿ ಎಂ ಕೆ

ತಂದೆಯ ಹೆಸರು : ಹಿರಿಯಣ್ಣ ಶೆಟ್ಟಿ

ಪ್ರಾಯ : 45 ವರ್ಷ

ಉದ್ಯೋಗ : ಹಿರಿಯ ಮೋಟಾರು ವಾಹನ ನಿರಿಕ್ಷಕರು, ಉಡುಪಿ

ವಾಸ : ಉಡುಪಿ

ದಿನಾಂಕ 21.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ</u>

ನಾನು ಸಪ್ಟೆಂಬರ್ 2018 ರಿಂದ ಉಡುಪಿ ಆರ್ ಟಿ ಓ ಕಚೇರಿಯಲ್ಲಿ ಹಿರಿಯ ಮೋಟಾರು ವಾಹನ ನಿರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 09.08.2023 ರಂದು ವೃತ್ತ ನೀರಿಕ್ಷಕರು ಕಾರ್ಕಳ ವೃತ್ತ ಇವರಿಂದ ಅಪಘಾತಕ್ಕೊಳಪಟ್ಟ ವಾಹನವನ್ನು ಪರಿಶಿಲಿಸಲು ಮನವಿ ಬಂದ ಮೇರೆಗೆ ಅದೇ ದಿನ ಸಂಜೆ 4.15 ಗಂಟೆಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣಾ ಆವರಣಕ್ಕೆ ಭೇಟಿ ನೀಡಿ ವಾಹನ ಸಂ. ಕೆಎ-20-ಝುಡ್ -4597 ಲಘು ಮೋಟಾರು ಕಾರು ಕೆಎ-20-ಇಎಫ್ -7367 ದ್ವಿಚಕ್ರ ವಾಹನವನ್ನು ಪರಿಶೀಲಿಸಿರುತ್ತೇನೆ.

ವಾಹನ ಸಂ. ಕೆಎ-20-ಝುಡ್ -4597 ಮುಂಭಾಗದ ಬಂಪರ್ ಎಡಭಾಗ ಬಾಗಿತ್ತು , ತಗ್ಗಿತ್ತು ಹಾಗೂ ಕಳಚಿಕೊಂಡಿತ್ತು. ಮುಂಭಾಗದ ಬಂಪರ್ ನ ಬಲ ತುದಿ ಉಜ್ಜಿತ್ತು, ಎಡಭಾಗದ ಹೆಡ್ ಲೈಟ್ ಒಡೆದಿತ್ತು, ಮುಂಭಾಗದ ನಂಬರ್ ಪ್ಲೇಟ್ ಒಡೆದಿತ್ತು, ಮುಂಭಾಗದ ಗ್ರಿಲ್ಸ್ ಬಾಗಿದ್ದವು ಹಾಗೂ ಒಡೆದಿತ್ತು, ಮುಂಭಾಡಗದ ವಿಂಡ್ ಸ್ಕ್ರೀನ್ ಗಾಜು ನುಜ್ಜುಗುಜ್ಜಾಗಿತ್ತು , ಬಾನೆಟ್ ಪ್ಯಾನೆಲ್ ಜಖಂಗೊಂಡು ಬಾಗಿತ್ತು, ಬಲಭಾಗದ ಹೆಡ್ ಲೈಟ್ ಬ್ರಾಕೆಟ್ ಮುರಿದಿತ್ತು , ರೆಡಿಯೇಟರ್, ಕಂಡೆನ್ಸರ್ , ರೆಡಿಯೇಟರ್ ಸಪೋರ್ಟ್ ಅಸೆಂಬ್ಲಿ

ಜಖಂಗೊಂಡು ಬಾಗಿತ್ತು ಮತ್ತು ಮುಂಭಾಗದ 2 ಬದಿಯ ಪೆಂಡರ್ ಪ್ಯಾನಲ್ ಗಳು ಬಾಗಿದದವು.

ದ್ವಿಚಕ್ರ ವಾಹನ ಸಂ. ಕೆಎ-20-ಇಎಫ್ -7367 ರ ಮುಂದಿನ ಚಕ್ರ ಮಡ್ ಗಾರ್ಡ್ ನ ಬಲ ಭಾಗ ಬಾಗಿತ್ತು ಮತ್ತು ಉಜ್ಜಿತ್ತು, ಮುಂಭಾಗದ ಬಾಡಿಶೆಪ್ ನ ಬಲಭಾಗ ಜಖಂಗೊಂಡು ಬಾಗಿತ್ತು ಹಾಗೂ ಉಜ್ಜಿತ್ತು ಮತ್ತು ಅದರ ಗಾರ್ಡ್ ಬಾಗಿತ್ತು, ಹೆಡ್ ಲೈಟ್ ಮಾಸ್ಕ್ ಹಾಗೂ 2 ಬದಿಯ ಇಂಡಿಕೇಟರ್ ಗಳು ಒಡೆದು ಮತ್ತು ಕಳಚಿತ್ತು, ಬಲಭಾಗದ ಹಿಂಬದಿಯ ಬಾಡಿಪೆನಲ್ ಮತ್ತು ಸೆಲೆನ್ಸ್ ರ್ ಬಾಗಿತ್ತು ಮತ್ತು ತಗ್ಗಿತ್ತು, ಅಡಿಗಟ್ಟಿನ ಮುಂದಿನ ತುದಿ ಹಾಗೂ ಸ್ಟೆರಿಂಗ್ ಕಾಲಂ ಬಾಗಿತ್ತು. ಎಡಭಾಗದ ಬಾಡಿಪೆನಲ್ ಗಳು ಹಾಗೂ ಅವುಗಳ ಗಾರ್ಡ್ ಗಳು ತರಚಿದ್ದವು. ಹಿಂದಿನ ಚಕ್ರದ ಬ್ರೆಕ್ ಲಿವರ್, ಎಡಬದಿಯ ಮಿರರ್ ಮತ್ತು ಅವುಗಳ ಬ್ರಾಕೆಟ್ ತುಂಡಾಗಿತ್ತು. ವಾಹನದ ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು.

ಸಂ. ಕೆಎ-20-ಝಡ್ --4597 ನ್ನು ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದ್ದು ವಾಹನದ ಅಡೆ ತಡೆಗಳು ಸುಸ್ಥಿತಿಯಲ್ಲಿದ್ದವು. ದ್ವಿಚಕ್ರ ವಾಹನ ಸಂ. ಕೆಎ-20-ಇಎಫ್ -7367 ನಿಂತ ಸ್ಥಿತಿಯಲ್ಲಿ ಪರಿಶೀಲಿಸಿದ್ದು ಹಿಂದಿನ ಬ್ರೇಕ್ ಲಿವರ್ ಮತ್ತು ಮೌಂಟೈನ್ ಮುರಿದಿತ್ತು ಮತ್ತು ಉಳಿದ ವಾಹನದ ಅಡೆ ತಡೆಗಳು ಸುಸ್ಥಿತಿಯಲ್ಲಿದ್ದವು.

ನನ್ನ ಅಭಿಪ್ರಾಯದಂತೆ ಸದ್ರಿ ಅಪಘಾತವು ವಾಹನದ ಯಾವುದೇ ಯಾಂತ್ರಿಕ ದೋಷಾದಿಂದ ಆಗಿರುವುದಿಲ್ಲ. ಈಗ ನಾನು ನೋಡಿದ ದಾಖಲೆಯು ನಾನು ನೀಡಿದ ವರದಿಯಾಗಿದ್ದು ಅದರಲ್ಲಿ ನನ್ನ ಸಹಿ ಇದ್ದು ಅದನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ದಾಖಲೆಯನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನಿಪಿ-4 ರಿಂದ 6 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು ಃ</u> ಆರೋಪಿ ಪರಃ ಶ್ರೀ ಎಸ್ ಕೆ ಎಸ್ ವಕೀಲರಿಂದ ಃ

ನಾನು ತಕ್ಷೀರು ನಡೆದ ಸ್ಥಳಕ್ಕೆ ಹೋಗಿರುವುದಿಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗಿದ್ದಲ್ಲಿ ವಾಹನವನ್ನು ಪರೀಶಿಲಿಸಿದ್ದರೆ ಅಪಘಾತ ಹೇಗೆ ಆಯಿತು ಮತ್ತು ವಾಹನದ ಸ್ಥಿತಿ ಗೊತ್ತಾಗು ತ್ತಿತ್ತು ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. ನಿಪಿ-15 ರ ಕಲಂ 8 ರಲ್ಲಿ ತಕ್ಷೀರು ಸ್ಥಳದಲ್ಲಿ ಮಾಡಲಾದ observation ಖಾಲಿ ಬಿಟ್ಟಿರುತ್ತೇನೆ. ಕಲಂ 9 ರಲ್ಲಿ ಅಪಘಾತದ ಕಾರಣ ಸ್ಪಷ್ಟವಾಗಿ ವಿಚಾರಣೆ ಮಾಡಿ ಬರೆಯಬೇಕಿತ್ತು ಎಂದರೆ ವಾಹನದ ಯಾವುದೇ ಯಾಂತ್ರಿಕ

ದೋಷದಿಂದ ಆಗಿರುವುದಿಲ್ಲ. ನಾನು ಪಂಚನಾಮೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ನೋಡಿರುವುದಿಲ್ಲ. ನಾನು ನನ್ನ ಕಚೇರಿಯಲ್ಲಿ ಕುಳಿತು ನಿಪಿ-15 ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ